

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕೊಪ್ಪಳದ ಹವ್ಯಾಸಿ ಪತ್ರಕರ್ತರ ಬಳಗದಿಂದ ಪ್ರದರ್ಶನಗೊಂಡ 'ಸಂಪತ್ತಿಗೆ ಸವಾಲ್' ನಾಟಕ

## ಕಂಪನಿ ನಾಟಕಗಳ ಘನತೆಯ ಗರಿ

# ಸಂಪತ್ತಿಗೆ ಸವಾಲ್

**ಉತ್ತರ ಕರ್ನಾಟಕದ ಕಂಪನಿ ನಾಟಕಗಳ ಬಾಕ್ಸ್ ಆಫೀಸಿನಲ್ಲಿ ಉತ್ತಮ ಕಲೆಕ್ಷನ್ ಮಾಡಿದ್ದ ಪಿ.ಬಿ. ಧುತ್ತರಗಿ ರಚಿತ 'ಸಂಪತ್ತಿಗೆ ಸವಾಲ್' ನಾಟಕ 50 ವರ್ಷಗಳ ನಂತರವೂ ತನ್ನ ಪ್ರಸ್ತುತತೆ ಉಳಿಸಿಕೊಂಡಿದೆ. ಈಚೆಗೆ ಕೊಪ್ಪಳದ ಹವ್ಯಾಸಿ ಪತ್ರಕರ್ತರ ಬಳಗ ಈ ನಾಟಕ ಪ್ರದರ್ಶಿಸಿದ್ದು ಅದಕ್ಕೆ ಸಾಕ್ಷಿಯಾಗಿತ್ತು.**

■ ಮಂಜುನಾಥ ಡಿ. ಡೊಳ್ಳಿನ

ವೃತ್ತಿ ರಂಗಭೂಮಿಯ ಕಂಪನಿ ನಾಟಕಗಳು ಅಭಿನಯಿಸುವ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಿಗೆ ತನ್ನದೇ ಆದ ಮಹತ್ವ ಹಾಗೂ ಇತಿಹಾಸವಿದೆ. ನಾಟಕಗಳು ಜನಮಾನಸವನ್ನು ಪ್ರಭಾವಿಸಿ ಅವರ ಬದುಕಿನಲ್ಲಿ ಬದಲಾವಣೆ ತಂದ ಹಲವು ಉದಾಹರಣೆಗಳು ಇವೆ. ಹೊಸ ತಂತ್ರಜ್ಞಾನ ಆಧಾರಿತ ಮಾಧ್ಯಮಗಳ ಪರಿಣಾಮ ಹಾಗೂ ಮಾರುಕಟ್ಟೆಯ ಅನಾರೋಗ್ಯಕರ ಪೈಪೋಟಿಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ದ್ವಂದ್ವಾರ್ಥ, ಅಶ್ಲೀಲ ಸಂಭಾಷಣೆ, ನೃತ್ಯಗಳಿಂದ ಕಂಪನಿ ನಾಟಕಗಳ ಬಗ್ಗೆ ನಿರ್ಲಕ್ಷ್ಯ ಉಂಟಾಗಿರುವುದು ನಿಜ. ಆದರೆ ಎಲ್ಲೋ ಕೆಲವರು ಮಾಡುವ ತಪ್ಪುಗಳಿಂದಲೇ ಕಂಪನಿ ನಾಟಕಗಳ ಮೌಲ್ಯ ನಿರ್ಧರಿಸುವುದು ಸರಿಯಲ್ಲ.

ಕನ್ನಡ ರಂಗಭೂಮಿಯನ್ನು ಜನಸಾಮಾನ್ಯರ ಬಳಿಗೆ ಕೊಂಡೊಯ್ದು ಮುಂದೆ ಸಿನಿಮಾ, ಆಧುನಿಕ ಪ್ರಯೋಗಾತ್ಮಕ ನಾಟಕಗಳ ಬೆಳವಣಿಗೆಗೆ ತಾಯಿಬೇರು ಎನಿಸಿರುವ ವೃತ್ತಿ ರಂಗಭೂಮಿಯ ಕಂಪನಿ ನಾಟಕಗಳ ಘನತೆ ಹೆಚ್ಚಿಸಿರುವ ಹತ್ತು ಹಲವು ಹೆಸರಾಂತ ನಾಟಕಗಳು ಹಾಗೂ ಕವಿಗಳು (ಉತ್ತರ ಕರ್ನಾಟಕದಲ್ಲಿ ನಾಟಕ ರಚನೆಕಾರರನ್ನು ಕವಿಗಳೆಂದು ಕರೆಯುತ್ತಾರೆ) ನಾಡಿನಲ್ಲಿ ಆಗಿ ಹೋಗಿದ್ದಾರೆ. ಕನ್ನಡದ ಅಂತಹ ಮಹತ್ವದ ನಾಟಕಕಾರರಲ್ಲಿ ಗುಬ್ಬಿ ವೀರಣ್ಣ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ

